2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,

ಬೆಳಗಾವಿ.

ಸೇಷನ್ ಕೇಸ್ ನಂ.22/2025

ಪಿ.ಡಬ್ಲ್ಯೂಃ 5

ಸಿ.ಡಬ್ಲ್ಯೂಃ 5

ಸಾಕ್ಷಿಯ ಹೆಸರುಃ ಶ್ರೀ. ಬಸವಪ್ರಭು ಬಸವಂತಪ್ಪಾ ಪಾಟೀಲ

ತಂದೆಯ ಹೆಸರುಃ ಬಸವಂತಪ್ಪಾ ಪಾಟೀಲ

ವಯಸ್ಸುಃ 55 ವರ್ಷ

ಉದ್ಯೋಗಃ ಕಿರಾಣಿ ವ್ಯಾಪಾರ

ವಾಸಃ ಅಶೋಕನಗರ, ಬೆಳಗಾವಿ

**ದಿನಾಂಕಃ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 15.10.2024 ರಂದು ಬೆಳಗ್ಗೆ 10.30 ಗಂಟೆಗೆ ನಾನು ಹಾಗೂ ಚಾಸಾಃ 4 ರವರು ವಂಟಮುರಿ ಕಾಲೋನಿಯ ದ್ವಿಪಥ ರಸ್ತೆಯಲ್ಲಿರುವ ಸಾಯಿ ಮಂದಿರಕ್ಕೆ ಹೋಗಿ ಹೊರಗೆ ಬಂದು ನಿಂತಿದ್ದ ಕಾಲಕ್ಕೆ ಅಲ್ಲಿಗೆ ಬಂದ ಮಾಳಮಾರುತಿ ಪೋಲೀಸರು ಬಂದು ನೀವು ಒಂದು ಪ್ರಕರಣದಲ್ಲಿ ಸಾಕ್ಷಿದಾರರಾಗಲು ಒಪ್ಪಿಗೆ ಇದೆಯೇ ಎಂದು ಕೇಳಿರುತ್ತಾರೆ ಅದಕ್ಕೆ ನಾವು ಹೌದು ಎಂದು ಹೇಳಿರುತ್ತೇವೆ. ಅದರಂತೆ ನಮ್ಮನ್ನು ಮಾಳಮಾರುತಿ ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಆ ಕಾಲಕ್ಕೆ ಪೋಲೀಸರು ನಮಗೆ ನೋಟೀಸ್ ನೀಡಿರುತ್ತಾರೆ. ಅದಕ್ಕೆ ನಾವು ಒಪ್ಪಿಗೆ ಪತ್ರವನ್ನು ಸಹ ನೀಡಿರುತ್ತೇವೆ.

2. ಸಾಕ್ಷಿಯು ಈಗ ಎರಡು ದಾಖಲೆಗಳನ್ನು ನೋಡಿ ಒಂದು ನೋಟೀಸ್ ಎಂದು ಮತ್ತೊಂದು ಒಪ್ಪಿಗೆ ಪತ್ರ ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ನಿಪಿಃ 14 ಮತ್ತು 15 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 14(ಎ) ಮತ್ತು 15(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಮ್ಮನ್ನು ಆಂಜನೇಯ ನಗರದಲ್ಲಿರುವ ಸೆಕ್ಟರ್ ನಂ.10 ರಲ್ಲಿರುವ ಪದ್ಮನ್ನನವರ ಮನೆಯ ಬಳಿ ಬರಬೇಕು ಎಂದು ಹೇಳಿರುತ್ತಾರೆ. ಅದರಂತೆ ನಾನು ಹೇಳಿದ ಜಾಗಕ್ಕೆ ಆ ದಿನ

ಸಾಯಂಕಾಲ 04.35 ಗಂಟೆಗೆ ಹೋಗಿರುತ್ತೇನೆ. ನಾನು ಹೋಗುವ ಮುನ್ನವೇ ಚಾಸಾಃ 4 ಆದಾಗಲೇ ಅಲ್ಲಿಗೆ ಬಂದಿದ್ದರು. ಆದಾದ ನಂತರ ನಾನು ಹಾಗೂ ಚಾಸಾಃ 4 ರವರು ಪದ್ಮನ್ನನವರ ಮನೆಯ ಎರಡನೇ ಮಹಡಿಗೆ ಹೋಗಿರುತ್ತೇವೆ. ಆ ಕಾಲಕ್ಕೆ ನಾನು, ಚಾಸಾಃ 3 ಅಲ್ಲದೇ ಮಾಳಮಾರುತಿ ಪೋಲೀಸ್ ಠಾಣೆಯ ಪೋಲೀಸರು ಹಾಗೂ ಸಂಜನಾ ಪದ್ಮನ್ನನವರ ಹಾಗೂ ವಿಶಾಲ ಇದ್ದರು. ಅವರು ಪದ್ಮನ್ನನವರ ಮನೆಯ ಸಿಸಿಟಿವಿ ಫುಟೇಜ್ ಇರುವ ಹಾರ್ಡ್ ಡಿಸ್ಕನ್ನು ಹಾಗೂ ಡಿವಿಆರ್ ನ್ನು ಅಲ್ಲಿ ತಂದು ಹಾಜರುಪಡಿಸಿರುತ್ತಾರೆ. ಅವುಗಳನ್ನು ಪೋಲೀಸರು ಪ್ಯಾಕ್ ಮಾಡಿ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದು ಜಪ್ತು ಮಾಡಿರುತ್ತಾರೆ. ಪಂಚನಾಮೆಯನ್ನು ಈಗ ನನಗೆ ತೋರಿಸಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದೇ ಆ ಪಂಚನಾಮೆ ಎಂದು ಅದರಲ್ಲಿ ನನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ದಾಖಲೆಯನ್ನು ನಿಪಿಃ 16 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 16(ಎ) ಮತ್ತು 16(ಬಿ) ಎಂದು ಗುರುತಿಸಲಾಯಿತು.

3. ಸಾಕ್ಷಿಯು ಈಗ ಎರಡು ಫೋಟೋಗಳನ್ನು ನೋಡಿ ಇವುಗಳನ್ನೇ ಹಾರ್ಡ್ ಡಿಸ್ಕನ್ನು ಹಾಗೂ ಡಿವಿಆರ್ ಗಳನ್ನು ಜಪ್ತು ಮಾಡುವ ಕಾಲಕ್ಕೆ ತೆಗೆದಿದ್ದು ಎಂದು ಹೇಳುತ್ತಾರೆ. ಅದರಲ್ಲಿ ನಾನು, ಚಾಸಾಃ 3, ಪೋಲೀಸರು, ಚಾಸಾಃ 1 ಹಾಗೂ ವಿಶಾಲ ಇದ್ದಾರೆ ಎಂದು ಗುರುತಿಸುತ್ತಾರೆ. ಸದರಿ ಫೋಟೋಗಳನ್ನು ಈಗ ಒಟ್ಟಾಗಿ ನಿಪಿಃ 17 ಎಂದು ಗುರುತಿಸಲಾಯಿತು.

4. ನನ್ನ ಸಮಕ್ಷಮ ಜಪ್ತು ಮಾಡಿದ ಹಾರ್ಡ್ ಡಿಸ್ಕನ್ನು ಹಾಗೂ ಡಿವಿಆರ್ ಗಳನ್ನು ತೋರಿಸಿದರೆ ಗುರುತಿಸುತ್ತೇನೆಂದು ಹೇಳುತ್ತಾರೆ. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು ಅದರಲ್ಲಿ ಒಂದು ಬ್ಲ್ಯೂಪೆದರ್ ಕಂಪನಿಯ 3 TB ಯ ಹಾರ್ಡ್ ಡಿಸ್ಕ ಇದ್ದು ಅದನ್ನು ಈಗ ನಿಪಿಃ 18 ಎಂದು ಗುರುತಿಸಾಯಿತು. ನಿಪಿಃ 18 ರ ಪ್ಯಾಕೇಟ ಮೇಲೆ ಅಂಟಿಸಿದ ಚೀಟಿಯ ಮೇಲೆ ಸಾಕ್ಷಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಈಗ ಮತ್ತೊಂದು ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು secures ಕಂಪನಿಯ ಡಿವಿಆರ್ ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅದನ್ನು

ಈಗ ನಿಪಿಃ 19 ಎಂದು ಗುರುತಿಸಲಾಯಿತು. ನಿಪಿಃ 19 ರ ಪ್ಯಾಕೇಟ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಾಕ್ಷಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಸದರಿ ಪಂಚನಾಮೆಯನ್ನು ಆ ದಿನ ಸಂಜೆ 06.00 ಗಂಟೆಯವರೆಗೂ ಮಾಡಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ. ಎಲ್.ಎಂ.ಎಚ್. ವಕೀಲರಿಂದಃ**

5. ನನ್ನನ್ನು ಸಾಯಿ ಮಂದಿರದ ಬಳಿ ಪಂಚನಾಮೆಗೆ ಕರೆದ ಪೋಲೀಸರ ಹೆಸರುಗಳು ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ಏನು ಜಪ್ತು ಮಾಡಬೇಕು ಎಂದು ನೋಟೀಸ್ ನಲ್ಲಿ ಬರೆದಿಲ್ಲ ಎಂದರೆ ಸರಿ. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ಪಂಚನಾಮೆಯನ್ನು ನಾನೇನು ಹೇಳಿ ಬರೆಸಿರುವುದಿಲ್ಲ. ಪಂಚನಾಮೆ ಕಾಲಕ್ಕೆ ಎಷ್ಟು ಜನ ಇದ್ದರು ಎಂದು ಪಂಚನಾಮೆಯಲ್ಲಿ ಬರದಿಲ್ಲ ಎಂದರೆ ಸರಿ. ಜಪ್ತು ಮಾಡಿದ ಹಾರ್ಡ್ ಡಿಸ್ಕ ಹಾಗೂ ಡಿವಿಆರ್ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿಃ 17 ಫೋಟೋಗಳನ್ನು ಪೋಲೀಸ್ ಠಾಣೆಯಲ್ಲಿ ತೆಗೆದಿದ್ದಾರೆಂದು ಸೂಚಿಸುವುದು ಸರಿಯಲ್ಲ. ನಾನು ಅಶೋಕನಗರದ ವಾಸಿಯಾಗಿರುವುದರಿಂದ ಅದು ಮಾಳಮಾರುತಿ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿರುವುದರಿಂದ ಅಲ್ಲಿನ ಪೋಲೀಸರು ನನಗೆ ಪರಿಚಯ ಎಂದರೆ ಸರಿಯಲ್ಲ. ಜಪ್ತು ಮಾಡಿದ ಹಾರ್ಡ್ ಡಿಸ್ಕ ಹಾಗೂ ಡಿವಿಆರ್ ಗಳಲ್ಲಿ ಏನು ಇದೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎನ್ನುವುದು ಸರಿ. ನನಗೆ ಪೋಲೀಸರು ಯಾವುದೇ ನೋಟೀಸ್ ನೀಡಿದ ಪಂಚನಾಮೆಗೆ ಕರೆದಿಲ್ಲ, ಠಾಣೆಯಲ್ಲಿ ಸೃಷ್ಟಿಸಿದ ದಾಖಲೆಗಳಿಗೆ ಸಹಿ ಮಾಡಿ ಪೋಲೀಸರು ಹೇಳಿದ್ದರಿಂದ ನಾನು ಪಂಚನಾಮೆಗೆ ಹೋಗಿದ್ದೆ, ಅಲ್ಲಿ ನಿಪಿಃ 18 ಮತ್ತು 19 ಗಳನ್ನು ನನ್ನ ಸಮಕ್ಷಮ ಜಪ್ತು ಮಾಡಿದ್ದಾರೆಂದು ನಾನು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.